ಊ) ಮೀನುಗಾರಿಕೆ ಇಲಾಖೆಯ ವ್ಯಂದ ಮತ್ತು ನೇಮಕಾತಿ ನಿಯಮಗಳನ್ನು 1990 ರಲ್ಲಿ ರೂಪಿಸಿದ್ದು ಸದರಿ ನಿಯಮಗಳನ್ನು ಪರಿಷ್ಕರಿಸುವ ಪ್ರಸ್ತಾವವು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ ಆ ಸಮಯದಲ್ಲಿ ಎಲ್ಲಾ ಲೋಪದೋಷಗಳನ್ನು ಸರಿಪಡಿಸಲು ಕ್ರಮ ಕೈಗೊಳ್ಳಲಾಗುವುದು

235(116) ಶ್ರೀ ಹೆಚ್ ಎಸ್ ಶಿವಶಂಕರ ರೆಡ್ಡಿ (ಗೌರಿ ಬಿದನೂರು)

ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

1) ಕೋಲಾರ ಜಿಲ್ಲೆಯ ಸಾಲ ಮನ್ನಾ ಯೋಜನೆಯಡಿಯಲ್ಲಿ ಪ್ರಯೋಜನ ಪಡೆದವರ ಸಂಖ್ಯೆ ಎಷ್ಟು?

2) ಈ ಪೈಕಿ ಸಾಲ ಮನ್ನಾ ಮಾಡಲಾದ ಪ್ರಮಾಣವೆಷ್ಟು? (ತಾಲ್ಲೂಕುವಾರು ವಿವರ ನೀಡುವುದು)

ಶ್ರೀ ಜಿ ಟಿ ದೇವೇಗೌಡ

1) ಕೋಲಾರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನಲ್ಲಿ 1985 ರೈತರು ಸಾಲ ಮನ್ನಾ ಯೋಜನೆಯಡಿಯಲ್ಲಿ ಪ್ರಯೋಜನ ಪಡೆದಿರುತ್ತಾರೆ

ಆ ಪೈಕಿ ರೂ 405 ಲಕ್ಷಗಳ ಸಾಲ ಮನ್ನಾ ಮಾಡಲಾಗಿದೆ ತಾಲ್ಲೂಕುವಾರು ವಿವರ ಈ ಕೆಳಕಂಡಂತಿರುತ್ತದೆ

ಕ್ರ ಸಂ	ತಾಲ್ಲೂಕು ಹೆಸರು	ಸಾಲಮನ್ನಾ ಯೋಜನೆಯಲ್ಲಿ ಮನ್ನಾ ಆದ ವಿವರ(ರೂ ಲಕ್ಷಗಳಲ್ಲಿ)	
		ಸಂಖ್ಯೆ	ಮೊತ್ತ
1	ಮುಳಬಾಗಿಲು	303	68 22
2	ಗೌರಿಬಿದನೂರು	374	78 08
3	ಬಾಗೇಪಲ್ಲಿ	258	37 29
4	ಚಿಂತಾಮಣಿ	250	49 44
5	ಬಂಗಾರಪೇಟೆ	425	99 51
6	ಗುಡಿಬಂಡೆ	102	15 02
7	ಶಿಡ್ಲಘಟ್ಟ	100	21 35
8	ಕೆ ಜಿ ಎಫ್	41	9 20
9	ಚಿಕ್ಕಬಳ್ಳಾಪುರ	38	7 53
10	ಮಾಲೂರು	75	16 47
11	ಕೋಲಾರ	18	3 69
	ಒಟ್ಟು		**405 70**

236(118) ಶ್ರೀ ಶಿಶಂಕರ ರೆಡ್ಡಿ ಎನ್ ಹೆಚ್ (ಗೌರಿ ಬಿದನೂರು)

ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಲಿಗೆ ಉತ್ತರಿಸುವರೇ?

ಅ) ಗೌರಿ ಬಿದನೂರು ತಾಲ್ಲೂಕಿನಲ್ಲಿ ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಯೋಜನೆಯಡಿಯಲ್ಲಿ ಶೇಕಡ 100 ರಷ್ಟು ಸಹಾಯಧನ ಪಡೆದ ರೈತರೆಷ್ಟು? (ವಿವರ ಒದಗಿಸುವುದು)

ಆ) ಬಹಳ ಜನ ರೈತರು ಸಹಾಯ ಧನ ಕೋರಿ ಅರ್ಜಿ ಸಲ್ಲಿಸಿದ್ದರೂ ಸಹ ಸಹಾಯಧನ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ?